ಶನಿವಾರ 20–09–2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01–ಸಂಚಿಕೆ 56
Digital Varthe Kannada Daily Volume 01 - Issue 56 Saturday 20-09-2025 Price: 5/- Rs 2 Pages Bengalore

DIGITAL VARTHE
www.digitalvarthe.com
digitalvarthe@gmail.com

# ಡಿಜಿಟಲ್ ವಾರ್ತೆ
ಕನ್ನಡಿಗರ ಶಕ್ತಿ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು
ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು
RNI:KNKAN/25/A1348
ಕನ್ನಡ ದಿನಪತ್ರಿಕೆ

## ಬೆಂಗಳೂರಿನ ರಸ್ತೆಗುಂಡಿಗಳಿಗೆ ರಸ್ತೆಗಳಿಗೆ ತೇಪೆ ಹಾಕುವ ಕಾರ್ಯ ಆರಂಭ

ಬೆಂಗಳೂರು: ಪ್ರತಿಷ್ಠಿತ ಸಂಸ್ಥೆಗಳು ನಗರವನ್ನು ಖಾಲಿ ಮಾಡುವ ಎಚ್ಚರಿಕೆ ನೀಡಿದ ನಂತರ ಇಲ್ಲಿನ ಗಂಡಾಗುಂಡಿ ರಸ್ತೆಗಳನ್ನು ದುರಸ್ತಿ ಮಾಡುವ ಕಾರ್ಯ ಇಂದಿನಿಂದ ಆರಂಭವಾಗಲಿವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರ ಆದ–'ೇಶದಂತೆ ಇಂದಿನಿಂದ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲೂ ಗುಂಡಿ ಮುಚ್ಚುವ ಕಾರ್ಯ ಶುರುವಾಗಲಿದೆ.ನಗರದಲ್ಲಿ ಇದುವರೆಗೂ ಸಾವಿರಾರು ಗುಂಡಿಗಳು ಪತ್ತೆಯಾಗಿವೆ.

ಹೀಗಾಗಿ ಪ್ರತಿ ನಗರ ಪಾಲಿಕೆಯ ಅಯುಕ್ತರ ನೇತೃತ್ವದಲ್ಲಿ ಗುಂಡಿ ಮುಚ್ಚುವ ಕಾರ್ಯ ಆರಂಭಿಸುವಂತೆ ಅವರು ಸೂಚನೆ ನೀಡಿದ್ದಾರೆ. ಮಹದೇವಪುರ, ಸರ್ಜಾಪುರ ಮತ್ತು ಬೆಳ್ಳಂದೂರು ರಸ್ತೆಗಳಲ್ಲಿ ಮೆಟ್ರೋ ಕಾಮಗಾರಿ ನಡೆಯುತ್ತಿದೆ. ಅ ಪ್ರದೇಶಗಳಲ್ಲಿ ಸದ್ಯ ತಾತ್ಕಾಲಿಕವಾಗಿ ಗುಂಡಿ ಮುಚ್ಚಲಾಗುವುದು. ಮೆಟ್ರೋ ಕಾಮಗಾರಿ ಮುಗಿದ ನಂತರ ಅಲ್ಲಿನ ರಸ್ತೆಗಳಿಗೆ ವೈಟ್ ಟ್ಯಾಪಿಂಗ್ ಮಾಡ್ತಿವಿ ಉಳಿದಂತೆ ನಗರದ ಅರ್ಧಭಾಗದ ರಸ್ತೆ ಗುಂಡಿಗಳನ್ನು ಮೂರು ದಿನಗಳಲ್ಲಿ ಮುಚ್ಚುತ್ತೇವೆ ಎಂದು ಮಹೇಶ್ವರ್ ರಾವ್ ಭರವಸೆ ನೀಡಿದ್ದಾರೆ. ಅಲ್ಲಿಯವರೆಗೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಆಯಾ ಪ್ರದೇಶಗಳ ಪ್ರತಿ ರಸ್ತೆಗಳಿಗೆ ಸ್ಥಳೀಯ ಎಂಜಿನಿಯರ್‌ಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಆ ಸಂದರ್ಭದಲ್ಲಿ ತಮಗೆ ಕಂಡು ಬರುವ ಗುಂಡಿಗಳನ್ನು 24 ಗಂಟೆಗಳ ಒಳಗೆ ಮುಚ್ಚಬೇಕು ಎಂದು ಅವರು ತಾಕೀತು ಮಾಡಿದ್ದಾರೆ. ಗುಂಡಿ ಮುಚ್ಚಿದ ನಂತರ ಅದರ ಛಾಯಾಚಿತ್ರಗಳನ್ನು ಅಯುಕ್ತರ Whatsapp ಹಾಗೂ ಸಾಮಾಜಿಕ ಜಾಲತಾಣದಲ್ಲಿ ಅಪ್ ಲೋಡ್ ಮಾಡಬೇಕು..ಒಂದು ವೇಳೆ ಗುಂಡಿ ಮುಚ್ಚಿಲ್ಲ ಅಂದ್ರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಮಹೇಶ್ವರ್ ರಾವ್ ಅವರ ಈ ಎಚ್ಚರಿಕೆ ನಂತರವಾದರೂ ಸ್ಥಳೀಯ ಅಧಿಕಾರಿಗಳು ನಗರದ ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಗಂಭೀರವಾಗಿ ಪರಿಗಣಿಸುವೇ ಅಥವಾ ಅದೇ ಉದಾಸೀನ ಭಾವ ಮುಂದುವರೆಸುವರೇ ಎನ್ನುವುದಕ್ಕೆ ಒಂದೆರಡು ದಿನಗಳಲ್ಲಿ ಉತ್ತರ ಸಿಗಲಿದೆ.



## ಜಿಎಸ್‌ಟಿ ಪರಿಷ್ಕರಣೆ ಬೆನ್ನಲ್ಲೇ ನಂದಿನಿ ಉತ್ಪನ್ನಗಳ ದರ ಇಳಿಕೆ ಸಾಧ್ಯತೆ..?

ಬೆಂಗಳೂರು: ಕೇಂದ್ರ ಸರ್ಕಾರವು ಸರಕು ಸೇವಾ ತೆರಿಗೆ (ಜಿಎಸ್‌ಟಿ) ಪರಿಷ್ಕರಣೆ ಮಾಡಿ ದೇಶದ ಜನತೆಗೆ ಬೆಲೆ ಏರಿಕೆ ಬಿಸಿ ತಗ್ಗಿಸಿದ ಬೆನ್ನಲ್ಲೇ ಸೋಮವಾರದಿಂದಲೇ (ಸೆ.22) ಅನ್ವಯವಾಗುವಂತೆ ನಂದಿನಿಯ ಕೆಲ ಉತ್ಪನ್ನಗಳ ದರ ಇಳಿಕೆಯಾಗಲಿದೆ.
ಕೇಂದ್ರ ಸರ್ಕಾರದ ಸೂಚನೆಯಂತೆ ಕೆಎಂಎಫ್ ನಂದಿನಿ ಉತ್ಪನ್ನಗಳ ಬೆಲೆ ಇಳಿಕೆ ಸಾಧ್ಯತೆಯಿದೆ. ದರ ಇಳಿಕೆ ಸಂಬಂಧ ಕೆಎಂಎಫ್‌ನ ಹಿರಿಯ ಅಧಿಕಾರಿಗಳ ಜೊತೆ ಮಹತ್ವದ ಸಭೆ ಕೂಡ ನಡೆಸಲಿದೆ.ಆಹಾರ ಉತ್ಪನ್ನಗಳ ಮೇಲಿನ ಜಿಎಸ್ ಟಿಯನ್ನ ಶೇ.12ರಿಂದ 5ಕ್ಕೆ ಇಳಿಕೆ ಮಾಡುವ ಸಾಧ್ಯತೆ ಇದೆ.

ಹೀಗಾಗಿ ಮೊಸರು, ತುಪ್ಪ, ಬೆಣ್ಣೆ, ಲಸ್ಸಿ ಸೇರಿದಂತೆ ನಂದಿನಿಯ ವಿವಿಧ ಉತ್ಪನ್ನಗಳ ದರ ಇಳಿಕೆಯಾಗಲಿದೆ ಎನ್ನಲಾಗಿದೆ.
ಬೆಣ್ಣೆ, ತುಪ್ಪ, ಚೀಸ್ ಮೇಲೆ ಮೊದಲು 12% ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು. ಆದರೆ ಈ ತೆರಿಗೆಯನ್ನು 5%ಕ್ಕೆ ಇಳಿಸಿದ್ದರಿಂದ ಈ ಉತ್ಪನ್ನಗಳ ಬೆಲೆ ಇಳಿಕೆಯಾಗಲಿದೆ.
ಪನ್ನಿರ್ ಮತ್ತು ಯುಹೆಚ್‌ಟಿ ಹಾಲಿಗೆ(ಗುಡ್ ಲೈಫ್) ಮೊದಲು 5% ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿತ್ತು. ಆದರೆ ಈಗ ಈ ಉತ್ಪನ್ನಗಳ ಮೇಲೆ ಶೂನ್ಯ ತೆ–ರಿಗೆ ಹಾಕಲಾಗುತ್ತದೆ. ಹೀಗಾಗಿ ಈ ವಸ್ತುಗಳ ಬೆಲೆ ಇಳಿಕೆಯಾಗುತ್ತಿದೆ.

ಮೊಸರು ದರ ಇಳಿಕೆ ಸಾಧ್ಯತೆ: ಮೊಸ–ರಿನ ದರ ಲೀಟರ್‌ಗೆ 4 ರೂಪಾಯಿ ವರೆಗೆ ಕಡಿಮೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ. ಅಧಿಕಾರಿಗಳ ಜೊತೆ ಸಭೆ ಬಳಿಕ ನಿರ್ಧಾರ ತೆಗೆದುಕೊಳ್ಳಲಿದ್ದು, ಸೋಮವಾರದಿಂದಲೇ ಪರಿಷ್ಕೃತ ದರ ಜಾ–




ರಿಗೊಳಿಸುವಂತೆ ಮಾರಾಟಗಾರರಿಗೆ ಸೂಚನೆ ನೀಡುವ ಸಾಧ್ಯತೆ ಇದೆ.
2017ರಲ್ಲಿ ಹಾಲಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ಜಾರಿಗೊಳಿಸಲಾಗಿತ್ತು. ಇದಾದ ಬಳಿಕ 2022ರಲ್ಲಿ ಜಿಎಸ್‌ಟಿಯನ್ನು ಶೇ 12ಕ್ಕೆ ಹೆಚ್ಚಿಸಲಾಗಿತ್ತು. ಈಗ ತೆ–ರಿಗೆ ದರ ಕಡಿಮೆ ಮಾಡಿರುವುದರಿಂದ ಗ್ರಾಹಕರಿಗೆ ಸ್ವಲ್ಪ ಮಟ್ಟಿಗೆ ಹೊರೆ ಕಡಿಮೆಯಾಗಿದೆ.
ಸೆ.22 ರಿಂದ ಇಳಿಕೆ ಯಾಕೆ?
ಸೆಪ್ಟೆಂಬರ್ ಮೊದಲ ವಾರದಲ್ಲಿ ದೆಹಲಿಯಲ್ಲಿ ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತೆರಿಗೆ ಪರಿಷ್ಕರಣೆ ಮಾಡುವ ಮಹತ್ವದ ನಿರ್ಧಾರ ಕೈಗೊಂಡಿದ್ದವು.2017ರಲ್ಲಿ ಜಾ–ರಿಯಾದ ಜಿಎಸ್‌ಟಿಯಲ್ಲಿ 0, 5%, 12%, 18%, 28% ಅಡಿಯಲ್ಲಿ ವಸ್ತುಗಳ ಮೇಲೆ ತೆರಿಗೆ ಹಾಕಲಾಗುತ್ತಿತ್ತು.

ಆದರೆ ಈಗ 12% ಮತ್ತು 28% ಸ್ಲ್ಯಾಬ್ ಅನ್ನು ತೆಗೆಯಲಾಗಿದ್ದು ಈ ಪಟ್ಟಿಯಲ್ಲಿದ್ದ ಬಹುತೇಕ ವಸ್ತುಗಳನ್ನು 5% ಮತ್ತು 18% ಶಿಫ್?ಟ ಮಾಡಲಾಗಿದೆ. ಇದರ ಜೊತೆ ಐಷಾರಾಮಿ ವಸ್ತುಗಳು (ತಂಬಾಕು, ಐಷಾರಾಮಿ ಕಾರುಗಳು ಇತ್ಯಾದಿ) ಮೇಲೆ 40% ತೆರಿಗೆ ಹಾಕಲಾಗುತ್ತದೆ.
ತೆರಿಗೆ ಪರಿಷ್ಕರಣೆಯಾದ ದರಗಳು ಸೆ.22 ರಿಂದ ಜಾರಿಗೆ ಬರಬೇಕು ಎಂಬ ನಿರ್ಧಾರವನ್ನು ಜಿಎಸ್‌ಟಿ ಕೌನ್ಸಿಲ್ ತೆಗೆದುಕೊಂಡ ಹಿನ್ನೆಲೆಯಲ್ಲಿ ಸೋಮವಾರದಿಂದ ದೇಶಾದ್ಯಂತ 99%ರಷ್ಟು ವಸ್ತುಗಳ ಬೆಲೆ ಇಳಿಕೆಯಾಗಲಿದೆ.
ಅಮೂಲ್ ಹಾಲಿನ ಬೆಲೆ ಇಳಿಯುತ್ತಾ?
ಸೆಪ್ಟೆಂಬರ್ 22 ರಿಂದ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದರ ತರ್ಕಬದ್ಧಗೊಳಿಸುವಿಕೆ ಜಾರಿಗೆ ಬಂದ ನಂತರ ಹಾಲಿನ ಬೆಲೆಗಳು ಕಡಿಮೆಯಾಗುತ್ತವೆ ಎಂಬ ಊಹಾಪೋಹ ಹರಿದಾಡುತ್ತಿದೆ.

ಈ ವಿಷಯದ ಕುರಿತು ಮಾತನಾಡಿರುವ ಅಮುಲ್ ಉತ್ಪನ್ನಗಳನ್ನು ಮಾರಾಟ ಮಾಡುವ ಸಂಸ್ಥೆಯಾದ ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್) ವ್ಯವಸ್ಥಾಪಕ ನಿರ್ದೇಶಕ ಜಯೆನ್ ಮೆಹ್ತಾ, ಪೌಚ್ ಮತ್ತು ಪ್ಯಾಕ್ ಮಾಡಿದ ಹಾಲಿನ ಬೆಲೆಗಳು ಬದಲಾಗುವುದಿಲ್ಲ ಎಂದಿದ್ದಾರೆ.
2017ರಲ್ಲಿ ಹಾಲಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ಜಾರಿಗೊಳಿಸಲಾಗಿತ್ತು.

## ಮತದಾನ ಹಕ್ಕು ಕಳೆದುಕೊಂಡ ಬಾಂಗ್ಲಾ ಪದಚ್ಯುತ ಪ್ರಧಾನಿ ಶೇಖ್ ಹಸೀನಾ



ಢಾಕಾ: ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ರಾಷ್ಟ್ರೀಯ ಗುರುತಿನ ಚೀಟಿಗಳನ್ನು ಲಾಕ್ ಮಾಡಲಾಗಿದ್ದು, ಪರಿಣಾಮವಾಗಿ ಅವರು ಮತದಾನದಿಂದ ವಂಚಿತರಾಗಿದ್ದಾರೆ. ಮುಂದಿನ ವರ್ಷ ಫೆಬ್ರವ–ರಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ಬಾಂಗ್ಲಾದೇಶದ ಚುನಾವಣಾ ಆಯೋಗ (ಇಸಿ) ಹೇಳಿದೆ, ರಾಷ್ಟ್ರೀಯ ಗುರುತಿನ (ಎನ್‌ಐಡಿ) ಕಾರ್ಡ್ ಲಾಕ್ ಆಗಿರುವ ಯಾರಾದರೂ ವಿದೇಶದಿಂದ ಮತ ಚಲಾಯಿಸಲು ಸಾಧ್ಯವಿಲ್ಲ ಎಂದು ಇಸಿ ಕಾರ್ಯದರ್ಶಿ ಅಖ್ತರ್ ಅಹದ್ ಇಲ್ಲಿನ ನಿರ್ಬಚೋನ್ ಭವನದಲ್ಲಿರುವ ತಮ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಅಹದ್ ಬೇರೆ ಯಾವುದೇ ಹೆಸರನ್ನು ಉಲ್ಲೇಖಿಸದಿದ್ದರೂ, ಹೆಸರಿಸದ ಇಸಿ ಅಧಿಕಾರಿಗಳನ್ನು ಉಲ್ಲೇಖಿಸಿ ಸುದ್ದಿ ಸಂಸ್ಥೆ ಮತ್ತು ಢಾಕಾ ಟ್ರಿಬ್ಯೂನ್ ಪತ್ರಿಕೆ, ಹಸೀನಾ ಅವರ ಕಿರಿಯ ಸಹೋದರಿ ಶೇಖ್ ರೆಹಾನಾ, ಮಗ ಸಜೀಬ್ ವಾಝೆದ್ ಜಾಯ್ ಮತ್ತು ಮಗಳು ಸೈಮಾ ವಾಝೆದ್ ಪುತುಲ್ ಅವರ ಎನ್‌ಐಡಿಗಳನ್ನು ಸಹ ಲಾಕ್ ಅಥವಾ ಬ್ಲಾಕ್ ಮಾಡಲಾಗಿದೆ ಎಂದು ವರದಿ ಮಾಡಿದೆ.
ರೆಹಾನಾ ಅವರ ಮಕ್ಕಳಾದ ಟುಲಿಪ್ ರಿಜ್ವಾನಾ ಸಿದ್ದಿಕ್, ಅಜಿನಾ ಸಿದ್ದಿಕ್ ಮತ್ತು ಸೋದರಳಿಯ ರದ್ವಾನ್ ಮುಜಿಬ್ ಸಿದ್ದಿಕ್ ಬಾಬಿ, ಅವರ ಸೋದರ ಮಾವ ಮತ್ತು ಹಸೀನಾ ಅವರ ಮಾಜಿ ಭದ್ರತಾ ಸಲಹೆಗಾರ ನಿವೃತ್ತ ಮೇಜರ್ ಜನರಲ್ ತಾರಿಕ್ ಅಹದ್ ಸಿದ್ದಿಕ್, ಅವರ ಪತ್ನಿ ಶಾಹಿನ್ ಸಿದ್ದಿಕ್ ಮತ್ತು ಅವರ ಪುತ್ರಿ ಬುಶ್ರಾ ಸಿದ್ದಿಕ್ ಅವರನ್ನೂ ನಿಷೇಧಿಸಲಾಗಿದೆ. ಆದಾಗ್ಯೂ, ನ್ಯಾಯವನ್ನು ತಪ್ಪಿಸಲು ವಿದೇಶಕ್ಕೆ ಓಡಿಹೋದವರು ಅಥವಾ ಇತರ ಕಾರಣಗಳಿಗಾಗಿ ತಮ ಎನ್‌ಐಡಿ ಕಾರ್ಡ್‌ಗಳು ಸಕ್ರಿಯವಾಗಿದ್ದರೆ ಇನ್ನೂ ಮತ ಚಲಾಯಿಸಬಹುದು ಎಂದು ಅಹದ್ ಹೇಳಿದರು.
ಹಸೀನಾ ಅವರ ಅವಾಮಿ ಲೀಗ್ ಸರ್ಕಾರ2024 ರ ಆಗಸ್ಟ್ 5 ರಂದು ಪತನಗೊಂಡಿತು.

ಹಿಂಸಾತಕ ವಿದ್ಯಾರ್ಥಿ ನೇತೃತ್ವದ ಚಳುವಳಿಯು ಭಾರತಕ್ಕೆ ತಪ್ಪಿಸಿಕೊಳ್ಳಲು ಕಾರಣವಾಯಿತು. ನೊಬೆಲ್ ಪ್ರಶಸ್ತಿ ವಿಜೇತ ಮುಹಮದ್ ಯೂನಸ್ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರರಾಗಿ ಅಧಿಕಾರ ವಹಿಸಿಕೊಂಡರು.
ಮಾನವೀಯತೆಯ ವಿರುದ್ಧದ ಅಪರಾಧಗಳು ಸೇರಿದಂತೆ ಆರೋಪಗಳ ಮೇಲೆ ಹಸೀನಾ ಮತ್ತು ಇತರ ಹಿರಿಯ ಅವಾಮಿ ನಾಯಕರ ವಿಚಾರಣೆಗೆ ಬಾಕಿ ಇರುವ ಅವಾಮಿ ಲೀಗ್ ಚಟುವಟಿ–ಕೆಗಳನ್ನು ಅಮಾನತುಗೊಳಿಸಿದರು. ಹಸೀನಾ ಪ್ರಸ್ತುತ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿಯಲ್ಲಿ ಗೈರುಹಾಜರಿಯಲ್ಲಿ ವಿಚಾರಣೆಗೆ ಒಳಗಾಗಿದ್ದಾರೆ, ಅಲ್ಲಿ ಪ್ರಾಸಿಕ್ಯೂಟರ್‌ಗಳು ಜುಲೈ 2024 ರ ದಂಗೆಯ ಸಮಯದಲ್ಲಿ ಆಪಾದಿತ ದೌರ್ಜನ್ಯಕ್ಕಾಗಿ ಮರಣದಂಡನೆಯನ್ನು ಕೋರಿದ್ದಾರೆ. ಬಾಂಗ್ಲಾದೇಶದ ಸ್ಥಾಪಕ ಮತ್ತು ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರ 32 ಧನಂಡಿ ನಿವಾಸ ಸೇರಿದಂತೆ ಗುಂಪುಗಳು ಅವರ ಆಸ್ತಿಗಳನ್ನು ಸುಟ್ಟುಹಾಕಿ ಧ್ವಂಸಗೊಳಿಸಿದ್ದರಿಂದ ಹೆಚ್ಚಿನ ಹಿರಿಯ ಅವಾಮಿ ಲೀಗ್ ನಾಯಕರು ಭೂಗತ ಅಥವಾ ದೇಶಭ್ರಷ್ಟರಾಗಿದ್ದಾರೆ.

## ಮಧ್ಯರಾತ್ರಿಯೇ ಆಪರೇಷನ್ ಸಿಂಧೂರ್ ನಡೆದದ್ದೇಕೆ ಗುಟ್ಟು ಬಿಟ್ಟುಕೊಟ್ಟ ಸಿಡಿಎಸ್ ಅನಿಲ್ ಚೌಹಾನ್



ರಾಂಚಿ: ಜಮು ಮತ್ತು ಕಾಶೀರದ ಪಹಲ್ಗಾಮ್‌ನಲ್ಲಿ ನಡೆದ ನರಮೇಧಕ್ಕೆ ಪ್ರತಿಕಾರವಾಗಿ ಸೇನಾ ಪಡೆಗಳು ಪಾಕಿಸ್ತಾನ ಹಾಗೂ ಪಿಒಕೆ ಮೇಲೆ ನಡೆಸಿದ ಅಪರೇಷನ್ ಸಿಂಧೂರ ಕಾರ್ಯಾಚಾರಣೆಯನ್ನು ಮಧ್ಯರಾತ್ರಿಯೇ ಏಕೆ ನಡೆಸಲಾಯಿತು ಎಂಬ ಗುಟ್ಟು ಕೊನೆಗೂ ರಟ್ಟಾಗಿದೆ.
ಭಾರತದ ರಕ್ಷಣಾ ಸೇನಾ ಸಿಬ್ಬಂದಿ ಜನರಲ್ ಅನಿಲ್ ಚೌಹಾನ್ ಅವರು ರಾಂಚಿಂ–ಯಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಆಪರೇಷನ್ ಸಿಂದೂರದ ಬಗ್ಗೆ ಮಹತ್ವದ ಮಾಹಿತಿಯೊಂದನ್ನು ಬಹಿರಂಗಪಡಿಸಿದ್ದಾರೆ.

ಮೇ 7 ರಾತ್ರಿ ಪಾಕಿಸ್ತಾನದ ಭಯೋತ್ಪಾದಕ ಕ್ಯಾಂಪ್‌ಗಳ ಮೇಲೆ ಭಾರತ ಏಕಾಏಕಿ ದಾಳಿ ಮಾಡಿ 9 ಉಗ್ರನೆಲೆಗಳನ್ನು ಸುಟ್ಟುಬೂದಿ ಮಾಡುತ್ತೆ. ಆದರೆ ಈ ದಾಳಿ ಮಧ್ಯರಾತ್ರಿ ನಂತರ (ರಾತ್ರಿ 1 ಗಂಟೆಯಿಂದ 1:30 ಗಂಟೆಯೊಳಗೆ) ಏಕೆ ಮಾಡಿದೆ ಎಂಬುದನ್ನು ವಿವರಿಸಿದರು.
ರಾತ್ರೋರಾತ್ರಿ ವೈಮಾನಿಕ ದಾಳಿ ನಡೆಸುವುದಕ್ಕೆ ಮುಖ್ಯವಾಗಿ ಎರಡು ಪ್ರಮುಖ ಕಾರಣಗಳಿವೆ ಎಂದು ಹೇಳಿದ ಚೌಹಾಣ್ ಮೊದಲನೆಯದಾಗಿ, ರಾತ್ರಿಯ ವೇಳೆಯೂ ಸಹ ನಮ ತಂತ್ರಜ್ಞಾನದ ಮೂಲಕ ಸ್ಪಷ್ಟ ಚಿತ್ರಣವನ್ನು ಪಡೆಯುವ ವಿಶ್ವಾಸ ನಮಗಿ–ತ್ತು. ಎರಡನೇಯದಾಗಿ, ಅಲ್ಲಿನ ಸಾಮಾನ್ಯ ಜನರಿಗೆ ಯಾವುದೇ ಹಾನಿಯಾಗದಂತೆ, ಸಾವುಗಳು ಸಂಭವಿಸದಂತೆ ತಡೆಯುವುದು ನಮ್ಮ ಉದ್ದೇಶವಾಗಿತ್ತು ಎಂದು ಹೇಳಿದರು.

ಪಾಕಿಸ್ತಾನದ ಮೇಲೆ ದಾಳಿ ಮಾಡುವುದಕ್ಕೆ ಉತ್ತಮ ಸಮಯ ಬೆಳಿಗ್ಗೆ 5:30 ರಿಂದ 6:00 ಎಂದು ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು ಹೇಳುತ್ತಾರೆ. ಆದರೆ ಬೆಳಗಿನ ಪ್ರಾರ್ಥನೆಯಿಂದಾಗಿ ಸಾಕಷ್ಟು ನಾಗರಿಕರು ಇದೇ ವೇಳೆಯಲ್ಲಿ ಸಂಚಾರ ಮಾಡುತ್ತಿದ್ದರು. ಬಹವಾಲ್ಪುರ್ ಮತ್ತು ಮುರಿಡ್ಕೆಯ ಆ ಸಮಯದಲ್ಲಿ, ಮೊದಲ ಅಜಾನ್ ಅಥ–'ವಾ ಮೊದಲ ಪ್ರಾರ್ಥನೆ ನಡೆಯುತ್ತದೆ, ಆ ಸಮಯದಲ್ಲಿ ಸಾಕಷ್ಟು ನಾಗರಿಕರ ಸಂಚಾರ ಇರುತ್ತೆ, ಒಂದು ವೇಳೆ ಈ ಸಂದರ್ಭದಲ್ಲಿ ದಾಳಿ ಮಾಡಿದ್ದರೆ ಅನೇಕ ಜನರು ಸಾವುನೋವುಗಳನ್ನು ಎದುರಿಸಬೇಕಿತ್ತು. ಆದರೆ ನಮ ಗುರಿ ಭಯೋತ್ಪಾದಕರು ಮತ್ತು ಅವರ ನೆಲೆಗಳಾಗಿತ್ತು.

ಅದಕ್ಕಾಗಿಯೇ ನಾವು ಮಧ್ಯರಾತ್ರಿ ನಂತರ ಅಂದರೆ 1:00 ರಿಂದ 1:30 ರ ನಡುವಿನ ಸಮಯವನ್ನು ಆರಿಸಿಕೊಂಡಿದ್ದೇವೆ ಎಂದು ಬಹಿರಂಗಪಡಿಸಿದರು.
2025 ಮೇ 7ರ ರಾತ್ರೋರಾತ್ರಿ, ಏಪ್ರಿಲ್ 22 ರಂದು ಜಮುಕಾಶೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ ಆಪರೇಷನ್ ಸಿಂದೂರ್ ಮೂಲಕ ಪಾಕಿಸ್ತಾನವನ್ನು ಗಢಗಢ ನಡುಗಿಸಿತ್ತು.
ಪಾಕಿಸ್ತಾನದ ಅಹಂಕಾರವನ್ನೂ ಆ ಒಂದು ರಾತ್ರಿ ಭಾರತೀಯ ಸೇನೆ ಸುಟ್ಟು ಭಸ ಮಾಡಿತ್ತು. ಪಾಕಿಸ್ತಾನ ತನ್ನ ಭೂಮಿಯಲ್ಲಿ ಜಾಗ ಕೊಟ್ಟು, ಸಾಕಿ ಸಲುಹಿದ್ದ ಉಗ್ರರ ನೆಲೆಯನ್ನು ಭಾರತ ಕೆಲವೇ ಕ್ಷಣಗಳಲ್ಲಿ ಧ್ವಂಸ ಮಾಡಿತ್ತು. ಅದೇ ಪಾಕಿಸ್ತಾನದ ವಿರುದ್ಧ ಭಾರತದ ಮಹತ್ವದ ಕಾರ್ಯಾಚರಣೆ ಆಪರೇಷನ್ ಸಿಂದೂರ್. ಭಾರತದ ಪರಾಕ್ರಮವನ್ನು ನೋಡಿ ಇಡೀ ದೇಶವೇ ನಿಬ್ಬೆರಗಾಗಿತ್ತು. ಭಾರತ ಕೊಟ್ಟ ಉತ್ತರಕ್ಕೆ ಪಾಕಿಸ್ತಾನ ಕೊನೆಗೂ ಅಂಗಲಾಚಿ ಕದನ ವಿರಾಮಕ್ಕೆ ಬೇಡಿಕೊಳ್ಳಬೇಕಾಯಿತು.

## ಮಿತಿಮೀರಿದ ವಾಹನಕಳ್ಳರ ಹಾವಳಿ :ಬೆಂಗಳೂರಿಗರೇ ನಿಮ್ಮ ಬೈಕ್ ಸ್ಕೂಟರ್ ಹುಷಾರ್

ವಿ.ರಾಮಸ್ವಾಮಿ ಕಣ್ವ ಜೀವನಮಟ್ಟ ಸುಧಾರಿಸು ತ್ತಿದ್ದಂತೆ ಮನುಷ್ಯನ ಅವಶ್ಯಕತೆಗಳು ಬಹಳಷ್ಟು. ಈಗಿನ ಕಾಲದ ಜನರಿಗೆ ವಾಹನಗಳು ಅತ್ಯಾವಶ್ಯಕವಾಗಿವೆ. ಅಗತ್ಯವೂ ಹೌದು. ನಗರಗಳ ಒಂದು ತುದಿಯಿಂದ ಮತ್ತೊಂದು ತುದಿಗೆ ಉದ್ಯೋಗ, ಶಿಕ್ಷಣ , ವ್ಯಾಪಾರ ಮುಂತಾದ ವ್ಯವಹಾರಗಳಿಗೆ ಪ್ರತಿದಿನ ವಾಹನಗಳಲ್ಲಿ ಹೋಗಿ ಬರುತ್ತಾರೆ. ಗ್ರೇಟ–ರ್ ಬೆಂಗಳೂರು ನಗರದಲ್ಲಿ ಇತರ ವಾಹನಗಳಿಗಿಂತ ಕಾರು, ಬೈಕ್, ಸ್ಕೂಟರ್‌ಗಳ ಸಂಖ್ಯೆ ಹೆಚ್ಚು. ಇವುಗಳ ಸಂಚಾರ ಸಹ ಅತಿ ಹೆಚ್ಚು. ಮೆಟ್ರೋ ರೈಲುಗಳು ಓಡಾಡುತ್ತಿದ್ದರೂ ಇವುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿಲ್ಲ.

ಸೂಕ್ತ ಸ್ಥಳದಲ್ಲಿ ಪಾರ್ಕಿಂಗ್ ಮಾಡಿ: ಬೆಂಗಳೂರು ನಗರದ ಬಹುದೊಡ್ಡ ಸಮಸ್ಯೆ ಎಂದರೆ ಪಾರ್ಕಿಂಗ್ (ವಾಹನ ನಿಲುಗಡೆ) . ಹೀಗಾಗಿ ಮಾಲೀಕರು ತಮ್ಮ ತಮ್ಮ ವಾಹನಗಳನ್ನು ಎಲ್ಲೆಂದರಲ್ಲಿ



ಜಾಗ ಸಿಕ್ಕ ಕಡೆಗಳಲ್ಲಿ ನಿಲ್ಲಿಸಿ ತಮ್ಮ ಕೆಲಸಗಳಿಗೆ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಹೊಂಚು ಹಾಕಿಕೊಂಡು ಕಾಯುತ್ತಿರುವ ವಾಹನ ಚೋರರು ಅವುಗಳನ್ನು ಕ್ಷಣ ಮಾತ್ರದಲ್ಲಿ ಕದ್ದು ಪರಾ–ರಿಯಾಗುತ್ತಾರೆ.
ಪ್ರತಿದಿನ 14 ದ್ವಿಚಕ್ರ ವಾಹನಗಳ ಕಳವು:
ಅಂಕಿ ಅಂಶಗಳ ಪ್ರಕಾರ 2023ರಲ್ಲಿ 6185 ಮತ್ತು 2024ರಲ್ಲಿ 5574 ವಾಹನಗಳು ಬೆಂಗಳೂರು ನಗರದಲ್ಲಿ ಕಳ್ಳತನವಾಗಿವೆ. ವಾಹನ ಕಳ್ಳತನಗಳಲ್ಲಿ ದ್ವಿಚಕ್ರ ವಾಹನಗಳೇ ಅತಿ ಹೆಚ್ಚು. 2023ರಲ್ಲಿ 5827 ಹಾಗೂ 2024ರಲ್ಲಿ 5254 ದ್ವಿಚಕ್ರ ವಾಹನಗಳ ಕಳ್ಳನತನವಾಗಿವೆ.

ಅಂದರೆ ಬೆಂಗಳೂರು ನಗರದಲ್ಲಿ ಪ್ರತಿದಿನ ಸರಾಸರಿ 14 ದ್ವಿಚಕ್ರ ವಾಹನಗಳು ಕಳುವಾಗುತ್ತಿವೆ.
ಮನೆ, ಕಚೇರಿ,ಮಾಲ್, ಬಸ್, ರೈಲ್ವೆ ನಿಲ್ದಾಣ ಮುಂಭಾಗ, ಮಾರ್ಕೆಟ್‌ಗಳ ಬಳಿ ನಿಲ್ಲಿಸಿದ ವಾಹನಗಳನ್ನು ಚೋರರು ಕ್ಷಣ ಮಾತ್ರದಲ್ಲಿ ಕಳ್ಳತನ ಮಾಡಿಕೊಂಡು ಹೋಗುತ್ತಾರೆ. ಬಹುತೇಕವಾಗಿ ವಾಹನ ಕಳ್ಳರು ನಕಲಿ ಕೀ ಬಳಸಿ ಇಲ್ಲವೆ ಹ್ಯಾಂಡ್‌ಲಾಕ್‌ಗಳನ್ನು ಕಾಲಿನಿಂದ ಒದ್ದು ಮುರಿದು ಕಳ್ಳತನ ಮಾಡುತ್ತಾರೆ ಎಂಬುವುದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.
ಹೀಗೆ ಕಳ್ಳತನ ಮಾಡಿಕೊಂಡು ಹೋದ ದ್ವಿಚಕ್ರ ವಾಹನಗಳನ್ನು ಪಾಳು ಮನೆಗಳಲ್ಲಿ ಅಥವಾ ತಮ್ಮ ಮನೆಗಳ ಸಮೀಪದ ಖಾಲಿ ಜಾಗಗಳಲ್ಲಿ ಅಥವಾ ಊರ ಹೊರವಲಯದ ತೋಪುಗಳಲ್ಲಿ ನಿಲ್ಲಿಸಿಕೊಂಡು ಒಂದೊಂದಾಗಿ ಮಾರಾಟ ಮಾಡುತ್ತಾರೆ. ಇಲ್ಲವೇ ತಮ್ಮ ಸಹಚರರು, ಸ್ನೇಹಿತರು, ನೆಂಟರ ಮೂಲಕ ಮಾರಾಟ ಮಾಡಿಸುತ್ತಾರೆ.

ಬೆಂಗಳೂರು ನಗರದಲ್ಲಿ ಕದ್ದ ವಾಹನಗಳನ್ನು ನಮ್ಮ ರಾಜ್ಯದ ಹಳ್ಳಿಗಳಲ್ಲಿ ಅಥ–'ವಾ ನೆರೆ ರಾಜ್ಯಗಳ ಹಳ್ಳಿಗಳಲ್ಲಿ ಮತ್ತು ಹಳ್ಳಿಗಳಲ್ಲಿ ಕಳವು ಮಾಡಿದ ವಾಹನಗಳನ್ನು ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಮಾರಾಟ ಮಾಡುತ್ತಾರೆ. ಕಂಬಿ ಎಣಿಸಬೇಕಾಗುತ್ತದೆ ಜೋಕೆ.! ಸೆಕೆಂಡ್ ಹ್ಯಾಂಡ್ ದ್ವಿಚಕ್ರ ವಾಹನ ಕೊಳ್ಳುವವರು ಬಹಳ ಜಾಗೃತರಾಗಿರಬೇಕು. ಕಳ್ಳಕಥೆ ಕಟ್ಟಿ ನಾನು ಕಷ್ಟದಲ್ಲಿದ್ದೇನೆ ಎಂದು ನಂಬಿಸಿ ವಾಹನ ಮಾರಾಟ ಮಾಡುತ್ತಾನೆ. ಕಡಿಮೆ ಬೆಲೆಗೆ ಸಿಕ್ಕಿತಲ್ಲ ಎಂದು ಖುಷಿಪಡಬೇಡಿ. ಕಳ್ಳ ಪೊಲೀಸರ ಕೈಗೆ ಸಿಕ್ಕಿಬಿದ್ದರೆ ಸೀದಾ ನಿಮ್ಮ ಮನೆ ತೋರಿಸುತ್ತಾನೆ. ಆಗ ಬಂದ ಪೊಲೀಸರು ವಾಹನ ತೆಗೆದುಕೊಂಡು ಹೋಗುತ್ತಾರೆ ಜೋಕೆ. ಇತ್ತೀಚೆಗೆ ರಾಜ್ಯ ಪೊಲೀಸರು ಕಳವು ಮಾಲುಗಳನ್ನು ಸ್ವೀಕರಿಸುವ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸುತ್ತಿದ್ದಾರೆ ಹುಷಾರ್.! ಮಾಲೀಕರೇ ಜಾಗರೂಕರಾಗಿ ವಾಹನ ಮಾಲೀಕರು ಸಹ ಜಾಗೃತರಾಗಿ ರಬೇಕು.

# ನಗರದಲ್ಲಿ ಜರುಗಿದ 36ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸದಸ್ಯರ ಸಭೆ

ಬೆಂಗಳೂರು: ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಪಿಂಚಣಿ ದಾರರ ಸಂಘದ ವತಿಯಿಂದ ರಾಜಾಜಿನಗರದ ಕ.ವಿ.ಪ್ರ.ನಿ. ನೌಕರರ ಸಮುದಾಯ ಭವನದಲ್ಲಿ 36ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸದಸ್ಯರ ಸಭೆ ಜರುಗಿತು.



ವಾರ್ಷಿಕ ಸರ್ವ ಸದಸ್ಯರ ಸಭೆಗೆ ಮುಖ್ಯ ಅತಿಥಿಗಳಾಗಿ ಬೆಂಗಳೂರು ವಿದ್ಯುತ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎನ್ .ಶಿವಶಂಕರ ಐಎಎಸ್ ಮತ್ತು ಕ.ವಿ.ಪ್ರ.ನಿ.ನಿ. ನೌಕರರ ಸಂಘ ಮತ್ತು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ ಬಲರಾಮ್, ಪ್ರಧಾನ ಕಾರ್ಯದರ್ಶಿಯಾದ ಕೆ ಶಿವರಾಂ, ಮತ್ತು ಕ.ವಿ.ಮ.ಪಿಂ ಸಂಘ (ರಿ) ಕೇಂದ್ರ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ.ಪಿ. ಕುಮಾರಸ್ವಾಮಿ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವೇದಿಕೆ ಗಣ್ಯರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾದ ಕೆ ಬಲರಾಮ್ ರವರು ಮಾತನಾಡಿ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ನಿಮಗೆ ಬೆನ್ನೆಲುಬಾಗಿ ಸದಾ ನಿಮ್ಮೊಡನೆ ಇರುತ್ತೇವೆ ಎಂದರು.

ಕೆ. ಶಿವರಾಂ ರವರು ಮಾತನಾಡಿ ಅಪಾರ ಸಂಖ್ಯೆಯ ಸಭೆಯನ್ನು ನೋಡಿ ಸಂತೋಷ ಪಟ್ಟರು 60 ತುಂಬಿದವರೆಲ್ಲಾ ಈ ಸಭೆಗೆ ಹಾಜರಾಗಿ ಉಪಸ್ಥಿತರಿರುವುದು ಬಹಳ ಸಂತೋಷ. ನಿಮ್ಮೊಡನೆ ನಾವು ಸದಾ ಕಾಲ ಇದ್ದು ಎಲ್ಲಾ ಕೆಲಸಗಳಿಗೂ ಸ್ಪಂದಿಸುತ್ತೇವೆ ಸಂಸ್ಥೆಗೆ ನೀವು ನೀಡುವ ಪ್ರಾಮಾಣಿಕ ಸೇವೆ ನಮ್ಮನ್ನು ನಿಮ್ಮ ಸೇವೆ ಮಾಡುವಂತೆ ಪ್ರೇರೇಪಿಸುತ್ತದೆ ಎಂದರು.

ಉದ್ಘಾಟಕರ ಮತ್ತು ಮುಖ್ಯ ಅತಿಥಿಗಳ ಭಾಷಣದ ನಂತರ ವೇದಿಕೆ ಗಣ್ಯರನ್ನು ಸಂಘದ ಪದಾಧಿಕಾ-ರಿಗಳು ಸನ್ಮಾನಿಸಿ ಗೌರವಿಸಿದರು. ವಾರ್ಷಿಕ ಸರ್ವ ಸದಸ್ಯರ ಹಾಗೂ ವಿಶೇಷ ಸದಸ್ಯರ ಸಭೆಯ ಕಾರ್ಯಕ್ರಮದ ವಂದನಾರ್ಪಣೆಯನ್ನು ಪಿಂಚಣಿ ಸಂಘದ ಉಪಾಧ್ಯಕ್ಷರಾದ ಜಿ ರಾಜು ಮಾಡಿದರು. ಪಿಂಚಣಿ ಸಂಘದ ಪದಾಧಿಕಾರಿಗಳು ಹಾಗೂ ಮುಖಂಡರು ಸದಸ್ಯರುಗಳು, ಬೆಂಗಳೂರು ವಿದ್ಯುತ್ ಕಂಪನಿಯ ನೌಕರರು, ಕ.ವಿ.ಪ್ರ.ನಿ.ನಿ ನೌಕರರು ಮತ್ತಿತರರು ಅಪಾರ ಸಂಖ್ಯೆಯಲ್ಲಿ ಹಾಜರಿದ್ದು, ಸಮುದಾಯ ಭವನ ಕಿಕ್ಕಿರಿದು ತುಂಬಿತ್ತು. ಹರ್ಷದಿಂದ ನಡೆದಿದ್ದ ಸವಭಿಕರು ಸಭೆಯನ್ನು ಯಶಸ್ವಿಗೊಳಿಸಿದರು.

# ಶ್ಯಾರಹಳ್ಳಿ ಪ್ರೀಮಿಯರ್ ಲೀಗ್ ಕ್ಲಾಸಿಕ್ ಸ್ಟ್ರೈಕರ್ಸ್ ಗೆ ಕಪ್ ಯಂಗ್ ಟೈಗರ್ಸ್ ರನ್ನರ್ ಅಪ್



ತಾಲ್ಲೋಕಿನ ಸಂತೇಬಾಚಹಳ್ಳಿ ಹೋಬಳಿಯ ಶ್ಯಾರಹಳ್ಳಿ ಗ್ರಾಮದಲ್ಲಿ ನೆಡೆದ ಶ್ಯಾರಹಳ್ಳಿ ಪ್ರೀಮಿಯರ್ ಲೀಗ್ ಚುಟುಕು ಕ್ರಿಕೇಟ್ ಪಂದ್ಯದಲ್ಲಿ ಶಿವು ನಾಯಕತ್ವದ ಕ್ಲಾಸಿಕ್ ಸ್ಟ್ರೈಕರ್ಸ್ ತಂಡವು ಗಣೇಶ್ ನಾಯಕತ್ವದ ಯಂಗ್ ಪೈಟರ್ಸ್ ತಂಡವನ್ನು ಹತ್ತು ರನ್ ಗಳಿಂದ ಮಣಿಸಿ ಚೊಚ್ಚಲ ಶ್ಯಾರಹಳ್ಳಿ ಪ್ರೀಮಿಯರ್ ಲೀಗ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಇಂದು ನೆಡೆದ ಪಂದ್ಯಾವಳಿಯಲ್ಲಿ ಶ್ಯಾರಹಳ್ಳಿ ಗ್ರಾಮದ ಒಟ್ಟು ಆರು ತಂಡಗಳು ಭಾಗವಹಿಸಿದ್ದವು ಒಂದು ತಂಡಕ್ಕೆ ನಾಲ್ಕು ಓವರ್ ಸೀಮಿತಗೊಳಿಸಲಾಗಿತ್ತು ಪೈನಲ್ ಗೇರಲು 5 ಪಂದ್ಯಗಳಲ್ಲಿ ಮೂರು ಪಂದ್ಯಗಳನ್ನು ಗೆಲ್ಲಲೇಬೇಕಾದ ಅನಿವಾರ್ಯವಾಗಿತ್ತು ಕೊನೆಯ ಹಂತದಲ್ಲಿ ಪೈನಲ್ ಗೇರಿದ ಉಭಯ ತಂಡಗಳು ಪೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕ್ಲಾಸಿಕ್ ಸ್ಟ್ರೈಕರ್ಸ್ ತಂಡವು ಮೂರು ಓವರ್ ಗಳಲ್ಲಿ ಮೂರು ವಿಕೇಟ್ ಕಳೆದುಕೊಂಡು 28 ರನ್ನ ಗಳಿಸಿತ್ತು ಯಂಗ್ ಟೈಗರ್ಸ್ ತಂಡವು ಮೂರು ಓವರ್ ಗಳಲ್ಲಿ ಏಳು ವಿಕೇಟ್ ಕಳೆದುಕೊಂಡು 19 ರನ್ ಗಳಿಸಲಷ್ಟೆ ಶಕ್ತವಾಯಿತು.

ಪೈನಲ್ ನಲ್ಲಿ ಜಯಿಸಿದ ತಂಡವು ಟ್ರೋಫಿ ಹಾಗೂ ಐದು ಸಾವಿರ ರೂಪಾಯಿ ನಗದು ಬಹುಮಾನ ಪಡೆದರೆ ದ್ವಿತೀಯ ಸ್ಥಾನ ಪಡೆದು ರನ್ನರ್ ಆಫ್ ತಂಡವಾದ ಯಂಗ್ ಟೈಗರ್ಸ್ ತಂಡವು ಟ್ರೋಫಿಯೊಂದಿಗೆ 3000 ನಗದು ಬಹುಮಾನ ಪಡೆಯಿತು ಪಂದ್ಯಾವಳಿಯಲ್ಲಿ ರಾಯಲ್ ಸ್ಟೈಕರ್ಸ್,ಜಸ್ಟೀಸ್ ಕ್ರೀಕೇಟರ್ಸ್,ಸುಪ್ರೀಮ್ ಸ್ವಿಂಗರ್ಸ್,ಲಯನ್ ಸ್ಟೈಕರ್ಸ್ ತಂಡಗಳು ಭಾಗವಹಿಸಿದ್ದವು ಪಂದ್ಯಾವಳಿಯಲ್ಲಿ ಯಾವುದೇ ಅಹಿತಕರ ಘಟನೆ ನೆಡೆಯದಂತೆ ಮುಂಜಾಗ್ರತ ಕ್ರಮಗಳನ್ನು ವಹಿಸಲಾಗಿತ್ತು.

ಇದೇ ಸಂದರ್ಭದಲ್ಲಿ ಪಂದ್ಯಾವಳಿಯ ಪ್ರೋತ್ಸಾಹಕರಾದ ಸಫಲ್ ನಾಗರಾಜು, ಎಸ್ ಆರ್ ಮನು,ಗ್ರಾಮ ಪಂಚಾಯತಿ ಅದ್ಯಕ್ಷೆ ಹೇಮಾನವೀನ್ ಸದಸ್ಯರಾದ ಮೀನಾಕ್ಷಿ ಪುರುಷೋತ್ತಮ, ನಂಜೇಗೌಡ್ರು(ಕ್ರೇನ್ ಮಾಲೀಕರು),ಹರೀಶ್ (ಗಾಣದ ಮಾಲೀಕರು) ಹರೀಶ್ ಎಸ್.ಡಿ,ಪುರುಷೋತ್ತಮ್-ಎಸ್.ಡಿ,ದೇವೇಂದ್ರ,ಚಂದ್ರಣ್ಣ (ಹೊಟೇಲ್), ಮನುರವರು (ಸರ್ವೇ) ಸೋಮಶೇಖರ್, ದೇವಾನಂದ,ರಾಮು, (ಕ್ಯಾಂಟರ್ ಮಾಲೀಕರು) ಬಸವರಾಜು (ಗ್ರಾ.ಪಂ. ಸದಸ್ಯರು), ಸೇರಿದಂತೆ ಗ್ರಾಮಸ್ಥರು ಯುವಕರು ಉಪಸ್ಥಿತರಿದ್ದರು.

# GST ಕಡಿತ ಹಿನ್ನೆಲೆ ನಂದಿನಿ ಮೊಸರು ತುಪ್ಪ ಬೆಲೆ ಇಳಿಕೆ ಸಾಧ್ಯತೆ

ಜಿಎಸ್ಟಿ ಕಡಿತಗೊಳಿಸುತ್ತಿರುವ ಹಿನ್ನೆಲೆಯಲ್ಲಿ ಭಾರತದಲ್ಲಿ ಆಟೊಮೊಬೈಲ್ ಕಂಪನಿಗಳು ತಮ್ಮ ಕಾರುಗಳ ಬೆಲೆಯನ್ನು ಕಡಿಮೆ ಮಾಡುತ್ತಿವೆ. ಅಲ್ಲದೇ ಎನ್ಡಿಡಿಬಿ (ನ್ಯಾಷನಲ್ ಡೈರಿ ಡೆವಲಪ್ಮೆಂಟ್ ಬೋರ್ಡ್) ಅಂಗಸಂಸ್ಥೆ ಹಾಗೂ ದೇಶದ ಎರಡನೇ ಅತಿದೊಡ್ಡ ಡೈರಿ ಸಂಸ್ಥೆಯಾದ ಮದರ್ ಡೈರಿಯ ಹಾಲು ಹಾಗೂ ವಿವಿಧ ಉತ್ಪನ್ನಗಳ ಬೆಲೆಯನ್ನು ಇಳಿಸಲಾಗಿದೆ. ಇತ್ತ ಕರ್ನಾಟಕದ ಸ್ಟಾರ್ ಬ್ರ್ಯಾಂಡ್ ಕೆ-ಎಂಎಫ್ ಸಹ ತನ್ನ ನಂದಿನಿ ಹಾಲಿನ ಕೆಲ ಉತ್ಪನ್ನಗಳ ದರ ಇಳಿಕೆಗೆ ಮುಂದಾಗಿದೆ.

ಮೊನ್ನೆ ಅಷ್ಟೇ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಆಹಾರ ಉತ್ಪನ್ನಗಳ ಮೇಲಿನ ಜಿಎಸ್ಟಿಯನ್ನು ಶೇ 12ರಿಂದ 5ಕ್ಕೆ ಇಳಿಕೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸೂಚನೆಯಂತೆ ಸೆಪ್ಟೆಂಬರ್ 22ರಿಂದ ಮೊಸರು, ತುಪ್ಪ, ಬೆಣ್ಣೆ, ಲಸ್ಸಿ ಸೇರಿದಂತೆ ನಂದಿನಿಯ ವಿವಿಧ ಉತ್ಪನ್ನಗಳ ಬೆಳೆ ಇಳಿಕೆ ಮಾಡಲು ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ (ಏಒಈ) ಮುಂದಾಗಿದೆ. ಮೊಸರಿಗೆ ಲೀಟರ್ ಗೆ ಬರೋಬ್ಬರಿ 4 ರೂಪಾಯಿವರೆಗೆ ಕಡಿಮೆಯಾಗುವ ಸಾಧ್ಯತೆಗಳಿವೆ. ನಂದಿನ ಉತ್ಪನ್ನಗಳ ದರ ಇಳಿಕೆ ಕುರಿತು ನಾಡಿದ್ದು ಅಂದರೆ ಸೆಪ್ಟೆಂಬರ್ 20ರಂದು ಕೆಎಂಎಫ್ ನ ಹಿರಿಯ ಅಧಿಕಾರಿಗಳ ಮಹತ್ವದ ಸಭೆ ನಡೆಯಲಿದ್ದು, ಬೆಲೆ ಇಳಿಕೆ ಬಗ್ಗೆ ಕೈಗೊಳ್ಳಲಿದೆ. ಒಂದು ವೇಳೆ




ಸಭೆಯಲ್ಲಿ ದರ ಇಳಿಕೆ ಬಗ್ಗೆ ನಿರ್ಧಾರ ಕೈಗೊಂಡರೆ, ಸೋಮವಾರದಿಂದಲೇ ನಂದಿನಿ ಉತ್ಪನ್ನಗಳ ಪರಿಸ್ಕೃತ ದರ ಜಾ-ರಿಯಾಗುವ ಸಾಧ್ಯತೆಗಳು ಇವೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಭಾರೀ ಅನುಕೂಲವಾಗಲಿದೆ.

2025, ಏಪ್ರಿಲ್ 1ರಂದು ನಂದಿನಿ ಹಾಲಿನ ಎಲ್ಲಾ ಮಾದ-ರಿಯ ಪ್ಯಾಕೆಟ್ ದರ ಪ್ರತಿ ಲೀಟರ್ಗೆ 4 ರೂಪಾಯಿ ಏರಿಕೆ ಮಾಡಿತ್ತು. ಜೊತೆಗೆ ಮೊಸರಿನ ದರವೂ ಸಹ ಪ್ರತಿ ಲೀಟರ್ಗೆ 4 ರೂಪಾಯಿ ಏರಿಕೆಯಾಗಿತ್ತು. ಇದೀಗ ಇದೇ ನಾಲ್ಕು ರೂಪಾಯಿಯನ್ನು ಕಡಿತ ಮಾಡಲು ಕೆಎಂಎಫ್ ಮುಂದಾಗಿದೆ. 2017ರಲ್ಲಿ ಕೇಂದ್ರ ಸರ್ಕಾರ ಹಾಲಿನ ಉತ್ಪನ್ನಗಳ ಮೇಲೆ ಜಿಎಸ್ ಟಿ ವಿಧಿಸಲಾಗಿತ್ತು. ನಂತರ 2022ರಲ್ಲಿ ಜಿಎಸ್ ಟಿಯನ್ನು ಶೇ 12ಕ್ಕೆ ಹೆಚ್ಚಿಸಲಾಗಿತ್ತು. ಇದ-ರಿಂದ ನಂದಿನಿ ಸೇರಿದಂತೆ ಎಲ್ಲಾ ಹಾಲಿನ ಉತ್ಪನ್ನಗಳ ಬೆಲೆ ಏರಿಕೆಯಾಗಿತ್ತು. ಇದು ಬಡ ಜನರಿಗೆ ಭಾರೀ ಹೊರೆಯಾಗಿತ್ತು. ಇದನ್ನು ಅರಿತ ಕೇಂದ್ರ, ಇದೀಗ ಆಹಾರ ಉತ್ಪನ್ನಗಳ ಮೇಲಿನ ಜಿಎಸ್ ಟಿಯನ್ನು ಇಳಿಕೆ ಮಾಡಿದೆ.

ಈಗ ತೆರಿಗೆ ದರ ಕಡಿಮೆ ಮಾಡಿರುವುದರಿಂದ ಜನಸಾಮಾನ್ಯ-ರಿಗೆ ಸ್ವಲ್ಪಮಟ್ಟಿಗೆ ಹೊರೆ ಕಡಿಮೆಯಾಗಿದೆ. ಇನ್ನು ದೇಶದ ಎರಡನೇ ಅತಿದೊಡ್ಡ ಡೈರಿ ಸಂಸ್ಥೆಯಾದ ಮದರ್ ಡೈರಿಯ (Moth-er Dairy) ಹಾಲು ಹಾಗೂ ವಿವಿಧ ಉತ್ಪನ್ನಗಳ ಬೆಲೆಯನ್ನು ಇಳಿಸಲಾಗಿದೆ. ಜಿಎಸ್ಟಿ (ಉಖಖ) ಕಡಿತದ ಹಿನ್ನೆಲೆಯಲ್ಲಿ ಸಂಸ್ಥೆಯು ಬೆಲೆಗಳನ್ನು 2ರಿಂದ 30 ರೂಗಳವರೆಗೆ ಕಡಿಮೆ ಮಾಡಿದೆ. ವರದಿ ಪ್ರಕಾರ, ಹಾಲು, ಮೊಸರು, ತುಪ್ಪ, ಬೆಣ್ಣೆ, ಪನೀರ್ ಇತ್ಯಾದಿ ಉತ್ಪನ್ನಗಳ ಬೆಲೆಯನ್ನು ಮದರ್ ಡೈರಿ ಕಡಿಮೆಗೊಳಿಸಿದೆ ಎಂದು ತಿಳಿದುಬಂದಿದೆ.

# ಮೈಸೂರು ದಸರಾ: ಎರಡು ದಿನ ಹೊರತು ಪಡಿಸಿ 18 ದಿನ ರಜೆ ಮಕ್ಕಳಿಗೆ ಹಬ್ಬವೋ ಹಬ್ಬ

ಕರ್ನಾಟಕ ಶಿಕ್ಷಣ ಇಲಾಖೆ ನಾಡಹಬ್ಬ ದಸರಾ ಮಹೋತ್ಸವ ಹಿನ್ನೆಲೆ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಿಗೆ 18 ದಿನ ರಜೆ ಘೋಷಿಸಿ ಆದೇಶ ಹೊರಡಿಸಿದೆ. ಆ ಮೂಲಕ ಶಾಲಾ ಮಕ್ಕಳಿಗೆ ಭರ್ಜರಿ ರಜೆ ನೀಡಲಾಗಿದೆ. ಆದರೆ ಗಾಂಧಿ ಜಯಂತಿ ಮತ್ತು ಶಾಸ್ತ್ರಿ ಜಯಂತಿ ಆಚರಣೆಗೆ ಕಡ್ಡಾಯವಾಗಿ ಶಾಲೆಗೆ ಹಾಜರಾಗುವಂತೆ ಸೂಚಿಸಲಾಗಿದೆ.



ಮೈಸೂರು ವಿಶ್ವವಿಖ್ಯಾತ ದಸರಾಗೆ ಸಜ್ಜಾಗಿದೆ. ಚಿನ್ನದ ಅಂಬಾರಿ ಹೊತ್ತು ಮೆರೆಯೋಕೆ ಗಜಪಡೆಯೂ ರೆಡಿಯಾಗಿದೆ. ಅರಮನೆಯಲ್ಲಿ ಖಾಸಗಿ ದರ್ಬಾರ್ಗೆ ಕೌಂಟ್ಡೌನ್ ಕೂಡ ಶುರುವಾಗಿದೆ. ಹೀಗಿರುವಾಗಲೇ ನಾಡಹಬ್ಬ ದಸರಾ ಮಹೋತ್ಸವವನ್ನು ಮಕ್ಕಳು ಸಹ ನೋಡಿ ಕಣ್ತುಂಬಿಕೊಳ್ಳಲಿ ಎಂದು ಶಿಕ್ಷಣ ಇಲಾಖೆ ನಾಳೆಯಿಂದ 18 ದಿನ ಸರ್ಕಾರಿ ಶಾಲೆಗಳಿಗೆ ಹಬ್ಬದ ರಜೆ ಘೋಷಣೆ ಮಾಡಿದೆ. ಎರಡು ದಿನ ಹೊರತು ಪಡಿಸಿ 18 ದಿನ ರಜೆ ಈ ಬಗ್ಗೆ ಶಿಕ್ಷಣ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದ್ದು, ನಾಳೆಯಿಂದ ಅಂದರೆ ಸೆ. 20 ರಿಂದ ಅಕ್ಟೋಬರ್ 7ರವರೆಗೆ ಸರ್ಕಾರಿ ಶಾಲೆಗಳಿಗೆ ಒಟ್ಟು 18 ದಿನ ಹಬ್ಬದ ರಜೆ ಘೋಷಿಸಿದೆ.

ಆದರೆ ಕಡ್ಡಾಯವಾಗಿ ಅಕ್ಟೋಬರ್ 2ರಂದು ನಡೆಯಲಿರುವ ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮಗಳಿಗೆ ಹಾಜರಾಗುವಂತೆ ಸೂಚಿಸಲಾಗಿದೆ. ರಾಜ್ಯ ಶಿಕ್ಷಣ ಇಲಾಖೆ ಹೊರಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ 18 ದಿನ ರಜೆ ನೀಡಲಾಗಿದೆ. ಆ ಮೂಲಕ ರಾಜ್ಯದ ಶಾಲಾ ಮಕ್ಕಳಿಗೆ ಈ ಬಾರಿ ಭರ್ಜರಿ ರಜೆ ನೀಡಲಾಗಿದೆ. ಈ ರಜೆ ಮಕ್ಕಳಲ್ಲಿ ಹಬ್ಬದ ಸಂಭ್ರಮ ದುಪ್ಪಟ್ಟು ಮಾಡಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಅಂದರೆ ಅದು ರಾಜ ಪರಂಪರೆ, ಗತಕಾಲದ ವೈಭವ. ಅಷ್ಟೇ ಅಲ್ಲ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿ ಉತ್ಸವ.

ಸೆಪ್ಟೆಂಬರ್ 22ರಂದು ಈ ಬಾರಿ ವಿಶ್ವವಿಖ್ಯಾತ ಮೈಸೂರು ದಸರಿಗೆ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಚಾಲನೆ ಸಿಗುತ್ತಿದೆ. ಅಂದಿನಿಂದ ಅಕ್ಟೋಬರ್ 2ವರೆಗೆ ಅಂ-ದರೆ 11 ದಿನಗಳ ಕಾಲ ದಸರಾ ಕಲರವ ಜೋರಾಗಿರಲಿದೆ. ಸರ್ಕಾರ ಈ ಬಾರಿ ದಸರಾ ಉದ್ಘಾಟನೆಗೆ ಅಂತರರಾಷ್ಟ್ರೀಯ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತೆ ಕನ್ನಡತಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದೆ. ಇನ್ನು ಸರ್ಕಾರದಿಂದ 11 ದಿನಗಳ ದಸರಾ ಮಹೋತ್ಸವ ಆಚರಣೆ ಮಾಡಲಾಗುತ್ತಿದೆ. ಅಕ್ಟೋಬರ್ 2ರಂದು ಜಂಬೂ ಸವಾರಿ ಕಣ್ತುಂಬಿಕೊಳ್ಳಲು ನಾಡಿನ ಜನತೆ ಕಾತುರರಾಗಿ ಕಾಯುತ್ತಿದ್ದಾರೆ. ಅಂಬಾರಿ ಹೊರುವ ಅಭಿಮನ್ಯುಗೆ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.